ಕೆಲ ಪಾದಚಿಹ್ನೆಗಳು ಪಶ್ಚಿಮ ದಿಕ್ಕಿಗೆ ಮೂಡಿದ್ದವು. ಕೊನೆಯಲ್ಲಿ, ಜಾರಿದಂತೆ, ದೀರ್ಘವಾಗಿ ಎಳೆದ ಬೂಟುಗಾಲಿನ ಹಿಮ್ಮಡಿ ಗುರುತು. ಕರಮಚಂದ ಅದನ್ನ ಅನುಸರಿಸಿ ನಡೆದು, ಕೆಳಗಿನ ಪ್ರಪಾತವನ್ನು ಅಳೆಯುವಂತೆ ನೋಡಿದ. ಬೈನಾಕುಲರ್ಸ್ ತೆಗೆದು, ಕೊರಕಲನ್ನು ತುಸು ಹೊತ್ತಿನವರೆಗೆ ವೀಕ್ಷಿಸಿ, ಇತ್ತ ಗಮನ ಹರಿಸಿದ. ವಾಹನವೊಂದು ಅಡ್ಡಾದಿಡ್ಡಿ ಚಲಿಸಿದಂತೆ ಚಕ್ರಗಳ ಗುರುತುಗಳು! ಆದರೆ ವಾಹನ ಎಲ್ಲಿಯೂ ಕಾಣಲಿಲ್ಲ. ಕರಮಚಂದ ಎದುರಿಗೆ ಗೋಚರಿಸುತ್ತಿದ್ದ ಅರಣ್ಯವನ್ನು ನಿರುಕಿಸುತ್ತಾ ಪ್ರಶ್ನೆ ಎಸೆದ,

"ನಿಮ್ಮ ಸಾಹೇಬರು ಇಲ್ಲೇ ತಾನೇ ಪ್ರಕೃತಿ ವೀಕ್ಷಣೆಗೆ ಹೋಗ್ತಾ ನಾಪತ್ತೆಯಾಗ್ತಿದ್ದಿದ್ದು?"

ಚಿಕ್ಕನಂಜಪ್ಪ ಹೂಂಗುಟ್ಟುವಂತೆ ಕತ್ತು ಕುಣಿಸಿದ.

**'ನೆನಪಾಯ್ತು! ಕ್ರಚಸ್ ಹಿಡಿದ, ಹ್ಯಾಟುಧಾರಿ!! ಆತನ ಬಲಗಾಲು ಊನ. ಅವ್ನು ಭಾಳ ಸಮಯದ ಹಿಂದೊಮ್ಮೆ ಬಂದಿದ್ದ. ನಮ್ ಅಂಗ್ಡೀಲೇ ನಿಂತಿದ್ದ. ಆಮೇಲೆ ಮೇಡಮ್ ಬಂದು, ಕಾರಿನಲ್ಲಿ ಕರೆದುಕೊಂಡು ಹೋದ್ರು. ಆಮೇಲೆ ನಾನವನ್ನ ಕಂಡಿದ್ದೇ ಇಲ್ಲ.'**

"ಚಿಕ್ಕನಂಜಪ್ಪ, ಚೆಂಗಪ್ಪನೋರು ನಿಮ್ಮ ಯಜಮಾನರ ಫ್ರೆಂಡ್ ಏನು? ಅವ್ನು ಏನ್ ಮಾಡ್ಕೊಂಡಿದಾನೆ?"

ಆತ ವ್ಯಂಗ್ಯವಾಗಿ ನಗು ಬೀರಿದ,

"ಆವಯ್ಯ ನಮ್ ಮೇಡಂಗೆ ಭಲೇ ಕ್ಲೋಸು. ವಿರಾಜಪೇಟೆ ಪ್ರಾಣಿ ಸಂಗ್ರಹಾಲಯದಲ್ಲಿ ಮ್ಯಾನೇಜರ್. ನಮ್ ಧನಿ ಯಾವಾಗ್ಲೂ ರೂಮಿನಾಗೆ ಬಚ್ಚಿಟ್ಟುಕೊಂಡಂತೆ ಕುಂತಿರ್ತಿದ್ರು. ಅದು ಅವರಿಬ್ಬರಿಗೆ ಚಲೋದಾಯ್ತು. ಚಕ್ಕಂದ ಆಡಿದ್ದೇ ಆಡಿದ್ದು! ನಮ್ ಧನಿಗೆ ಯಾವ್ದೂ ಗೊತ್ತಾಗೊಲ್ಲ..."

"ಸೋಮಯ್ಯ, ಮೋಹಿತರ ವಕೀಲರು ಯಾರು ಅಂತ ಗೊತ್ತೇನು?"

"ಪೂಣಚ್ಚ. ಅವ್ನ ಕಚೇರಿ ಇರೋದು ಕೋರ್ಟಿನ ಹತ್ತಿರವೇ..."

ಆ ರಾತ್ರಿ ನಾವು ಮನೆಯಲ್ಲಿ ಬಹಳ ಹೊತ್ತು ಮೋಹಿತನ ನಾಪತ್ತೆ ಪ್ರಕರಣದ ಬಗ್ಗೆ ಚರ್ಚಿಸುತ್ತಾ ಮಲಗುವಾಗ ತಡವಾಗಿತ್ತು. ನಾವಿಬ್ಬರೂ ಒಂದೇ ಮನೆಯಲ್ಲಿ ವಾಸವಾಗಿದ್ದೆವು. ಕೆಳಗಡೆ ಮನೆ. ಮೊದಲ ಮಹಡಿಯಲ್ಲಿ ಕಚೇರಿ. ರಾತ್ರಿ ಮಧ್ಯೆ ಟಾಯ್ಲೆಟಿಗೆ ಹೋಗಲು ಎದ್ದಾಗ ನಾನು ಗಮನಿಸಿದೆ... ಕರಮಚಂದ ತನ್ನ ಮಂಚದಲ್ಲಿರಲಿಲ್ಲ! ಅಪರಾತ್ರಿಯಲ್ಲಿ ಕೆಲವೊಮ್ಮೆ ತನಿಖೆಗೆ ಆತ ಸಂಚರಿಸುವುದು ಸಾಮಾನ್ಯವಾದ್ದರಿಂದ ನಾನು ಹೆಚ್ಚು ತಲೆ ಕೆಡಿಸಿಕೊಳ್ಳದೆ, ಮಂಚದಲ್ಲಿ ಒರಗಿದೆ.

★★★

ಮರುದಿನ ನನಗೆ ಎಚ್ಚರವಾಗುವಾಗ ತಡವಾಗಿತ್ತು. ಕಿಚನ್‌ನಲ್ಲಿ ಕರಮಚಂದ ಚಹಾ ಹೀರುತ್ತಾ, ಬೆಳಗ್ಗಿನ ಪತ್ರಿಕೆ ಓದುವುದರಲ್ಲಿ ಮಗ್ನನಾಗಿದ್ದ. ಆತನ ಮೊಗದಲ್ಲಿ ವಿಶಿಷ್ಟವಾದ